**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/11/2024)**

**ಪಾಟೀ ಸವಾಲು : 1 ರಿಂದ 5, 7 ರಿಂದ 9 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಬಿ ಬಿ ವಕೀಲರಿಂದ,**

ವಾದಿಯ ಸಾಮಾನ್ಯ ಮೊಕ್ತ್ಯಾರುನಾಮೆಯನ್ನು ಹೊಂದಿರುವ ಅಬ್ದುಲ್ ಸಮದ್ ಸಿದ್ದಿಬಾಪುರವರು ನನಗೆ 8-9 ವರ್ಷಗಳಿಂದ ಪರಿಚಿತರು. ಅದಕ್ಕಿಂತ ಪೂರ್ವದಲ್ಲಿ ವಾದಿ ಮತ್ತು ಸದ್ರಿ ಅಬ್ದುಲ್ ಸಮದ್ ಸಿದ್ದಿಬಾಪುರವರ ಕುಟುಂಬದ ಬಗ್ಗೆ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ದಾಖಲಿಸಿದಾಗ ನನ್ನ ವಯಸ್ಸು 27 ಆಗಿತ್ತು.

2. ನನ್ನ ಮನೆ ಭಟ್ಕಳ ನಗರದ ಅನ್ಫಲ್ ಸೂಪರ್ ಮಾರ್ಕೆಟ್ ನ ಹತ್ತಿರ ಇರುತ್ತದೆ. ದಾವಾ ಆಸ್ತಿಯು ಮಗ್ದುಮ್ ಕಾಲೋನಿಯ ಗುಡ್ಡದ ಮೇಲೆ ಇರುತ್ತದೆ. ದಾವಾ ಆಸ್ತಿಯು ನನ್ನ ಮನೆಯಿಂದ 4-5 ಕಿಲೋಮೀಟರ್ ದೂರದಲ್ಲಿರುತ್ತದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗಾಗಲೀ ಅಥವಾ ನನ್ನ ತಂದೆ ತಾಯಿಗಾಗಲೀ ಯಾವುದೇ ಆಸ್ತಿ ಇರುವುದಿಲ್ಲ. ದಾವಾ



ಆಸ್ತಿಯು ಭಟ್ಕಳ ಗ್ರಾಮದಲ್ಲಿರುತ್ತದೆ. ದಾವಾ ಆಸ್ತಿಯಲ್ಲಿ ಎಷ್ಟು ಆಸ್ತಿಗಳಿವೆ ಎಂದು ಗೊತ್ತಿಲ್ಲ. ಹಾಗೆ ದಾವಾ ಶೆಡ್ಯೂಲ್ ನಲ್ಲಿ ಎಷ್ಟು ಸರ್ವೆ ನಂಬರಗಳನ್ನು ಕಾಣಿಸಿದ್ದಾರೆ ಎಂದು ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಶೆಡ್ಯೂಲ್ ನಲ್ಲಿ ಎಷ್ಟು ಆಸ್ತಿಗಳಿವೆ ಅವುಗಳ ಸರ್ವೆ ನಂಬರ ಏನು ಎಂಬ ಬಗ್ಗೆ ಬರೆಸಿರುವುದಿಲ್ಲ. ದಾವಾ ಆಸ್ತಿಯನ್ನು ಯಾರು, ಎಷ್ಟನೇ ಇಸವಿಯಲ್ಲಿ ಯಾರಿಂದ ಖರೀದಿ ಮಾಡಿದರೆಂದು ನನಗೆ ಗೊತ್ತಿಲ್ಲ.

3. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಅಬ್ದುಲ್ ಸಮದ್ ಸಿದ್ದಿಬಾಪುರವರು ಹೇಳಿ ಬರೆಸಿರುತ್ತಾರೆ. ನಾನು ಅಬ್ದುಲ್ ಸಮದ್ ಸಿದ್ದಿಬಾಪುರವರಿಗೆ 8-9 ವರ್ಷಗಳಿಂದ ಪರಿಚಿತ ಇರುವುದರಿಂದ ದಾವಾ ಆಸ್ತಿಯ ವಾಸ್ತವಿಕತೆಯ ಬಗ್ಗೆ ಏನು ಗೊತ್ತಿಲ್ಲದೇ ಸುಳ್ಳು ವಿಚಾರಗಳನ್ನು ಹೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**